792 (831) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ನಗರವು ಅಭಿವೃದ್ಧಿಯಾಗಿದ್ದು ಇಲ್ಲಿ ಅನೇಕ ಹೊಸ ಬಡಾವಣೆಗಳು ನಿರ್ಮಾಣವಾಗಿದ್ದು ಈ ಹೊಸ ಪ್ರದೇಶಗಳಲ್ಲಿ ಒಳಚರಂಡಿ ಇಲ್ಲದಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಒಳಚರಂಡಿ ಯೋಜನೆ ಇಲ್ಲದಿದ್ದಲ್ಲಿ ನೈರ್ಮಲ್ಯ ಕೆಟ್ಟು ಜನರ ಆರೋಗ್ಯಕ್ಕೆ ಧಕ್ಕೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯೋಜಿಸುತ್ತದೆಯೋ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬಂದಿದೆ

ಆ) ಬಂದಿದೆ

ಇ) ಚಿಂತಾಮಣಿ ನಗರದಲ್ಲಿ ಮೊದಲನೇ ಹಂತದ ಒಳಚರಂಡಿ ಯೋಜನೆಯನ್ನು ಪೂರ್ಣಗೊಳಿಸಲಾಗಿದೆ. ಎರಡನೇ ಹಂತದಲ್ಲಿ ಬಾಗೇಪಲ್ಲಿ ರಸೆಂ ರೈಲ್ವೆಸ್ಟೇಷನ್ ರಸ್ತೆ, ಶ್ರೀನಿವಾಸಪುರ ರಸ್ತೆಗಳಲ್ಲಿ ಶಿಟ್‌ಹಾಲ್ ಸಿವರ್ ಹಾಗೂ ನಗರದ ಹೊಸ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಹಕ್ಕಿ ಪಿಕ್ಕಿಗಳ ಕಾಲೋನಿಯ ರಸ್ತೆ ಅಭಿವೃದ್ಧಿ

793 (834) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರಕ್ಕೆ ಸೇರಿದ ಬಾಗೇಪಲ್ಲಿ ತಾಲ್ಲೂಕು ಚೇಳೂರು ಹೋಬಳಿಯಲ್ಲಿ ಹಕ್ಕಿ ಪಿಕ್ಕಿ ಕಾಲೋನಿ ಗ್ರಾಮಕ್ಕೆ ಗುಂಡ್ಲುಹಳ್ಳಿಯಿಂದ ರಸ್ತೆ ಮಾಡಲು ಸಮಾಜ ಕಲ್ಯಾಣ ಇಲಾಖೆಯಿಂದ ಮಂಜೂರಾದ ಹಣವೆಷ್ಟು?

ಆ) ಈ ಕಾಮಗಾರಿಯು ಅರ್ಧದಲ್ಲಿ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರಿಂದ ಆ ಗ್ರಾಮದ ಹಕ್ಕಿ-ಪಿಕ್ಕಿ ಜನಾಂಗಕ್ಕೆ ಬಹಳ ತೊಂದರೆಗೊಳಗಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಇ) ಈ ಕಾಮಗಾರಿಗೆ ಈಗಾಗಲೇ ಎಷ್ಟು ಹಣ ಗುತ್ತಿಗೆದಾರರಿಗೆ ಪಾವತಿಸಲಾಗಿದೆ ಮತ್ತು ಪೂರ್ಣಗೊಳಿಸಲಾದ ಕಾಮಗಾರಿ ಕೆಲಸವೆಷ್ಟು; (ವಿವರ ನೀಡುವುದು)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಬಾಗೇಪಲ್ಲಿ ತಾಲ್ಲೂಕಿನ ಚೇಳೂರು ಹೋಬಳಿಯಲ್ಲಿ ಹಕ್ಕಿ ಪಿಕ್ಕಿ ಕಾಲೋನಿ (ಪೆಮ್ಮಯ್ಯ ಗಾರಿಪಲ್ಲಿ) ಯಿಂದ ಗುಂಡ್ಲುಪಲ್ಲಿವರೆಗೆ ರಸ್ತೆ ನಿರ್ಮಾಣ ಮಾಡಲು ರೂ. 17.51 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

ಆ) ಹೌದು

ಇ) ಈ ಕಾಮಗಾರಿಯನ್ನು ಇಲಾಖಾವತಿಯಿಂದ ನಿರ್ವಹಿಸಿರುವುದಿಲ್ಲ. 1.80 ಕಿ.ಮಿ. ಉದ್ದದ ರಸ್ತೆಯನ್ನು ನಿರ್ಮಿಸಿ ಎರಡೂ ಬದಿಗಳಲ್ಲಿ ಚರಂಡಿಗಳನ್ನು ಅಗೆಯುವ ಕೆಲಸ ಪೂರ್ಣಗೊಂಡಿದೆ. ಮೋರಿಗಳನ್ನು ನಿರ್ಮಿಸಲು ಬೇಕಾಗುವ ಸಿಮೆಂಟ್ ಪೈಪುಗಳು ಲಭ್ಯವಿಲ್ಲದಕಾರಣ ಕಾಮಗಾರಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಈಗ ನಿಮೆಂಟ್ ಪೈಪುಗಳನ್ನು ಕಾಮಗಾರಿಯ ಸ್ಥಳದಲ್ಲಿ ಸರಬರಾಜು ಮಾಡಲಾಗಿದ್ದು, ಕೆಲಸವನ್ನು ಸಧ್ಯದಲ್ಲಿಯೇ ಪೂರ್ಣಗೊಳಿಸಲಾಗುವುದು.

ಅಥಣಿ ತಾಲ್ಲೂಕನ್ನು ಭೂದು ಪ್ರದೇಶವೆಂದು ಪ್ರಕಟಿಸುವುದು

795 (1070) ಶ್ರೀ ಡೊಂಗರಗಾಂವ ಶಹಜಹಾನ ಇಸ್ಮಾಯಿಲ್ (ಅಥಣಿ) : ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಥಣಿ ತಾಲ್ಲೂಕನ್ನು ಭೂದು ಪ್ರದೇಶವೆಂದು ಪ್ರಕಟಿಸುವುದು ಸೂಕ್ತವಾಗಿದೆಯೇ; ಈ ಅವಧಿಯ ಮುಕ್ತಾಯಗೊಂಡು ಇದನ್ನು ಯಾವಾಗ ಮುಕ್ತಗೊಳಿಸುವುದು;

ಆ) ಅಥಣಿ ತಾಲ್ಲೂಕಿನ ಅಗ್ರಾಣಿ ಹಳ್ಳದಿಂದ ಮರಳನ್ನು ಸಾಗಿಸುತ್ತಿರುವುದರಿಂದ ಅದರಿಂದಾಗುವ ದುಷ್ಪರಿಣಾಮ ಹಾಗೂ ಹಾನಿಯ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಮರಳಿನ ಸಾಗಾಣಿಕೆಯನ್ನು ರದ್ದುಪಡಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ;

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು) :

ಅ) ಹೌದು ಸೂಕ್ತವಾಗಿದೆ. ಈ ಪ್ರಸ್ತುತ ಅಂತರ್ಜಲದ ಸ್ಥಿತಿಗಳಿಯ ಬಗ್ಗೆ ಮೌಲೀಕರಣ ಮಾಡಲು ರಾಜ್ಯದಾದ್ಯಂತ ಜಲಾನಯನ ಪ್ರದೇಶಗಳನ್ನಾಗಿ ವಿಂಗಡಿಸಿ, 1999ರ ಡಿಸೆಂಬರ್ ಅಂತ್ಯಕ್ಕೆ ವರದಿಯನ್ನು ಮರು ಪ್ರಕಟಪಡಿಸುವಂತೆ ಅಂತರ್ಜಲ ಮೌಲೀಕರಣ ಸಮಿತಿಯು ಆದೇಶ ನೀಡಿದ ಮೇರೆಗೆ, ಇಲಾಖೆಯು ಎಲ್ಲಾ ಜಿಲ್ಲೆಗಳಲ್ಲಿ ಜಲಾನಯನವಾರು ಮೌಲೀಕರಣ ಮಾಡಿದ ವಿವರಗಳನ್ನು ಪಡೆದು, ಮೌಲೀಕರಣ ಮಾಡಿ ವರದಿಯನ್ನು ತಯಾರುಮಾಡುತ್ತಿದೆ. ಸದರಿ ವರದಿಯನ್ನು ನಬಾರ್ಡ್ ಸಂಸ್ಥೆಯು ಕೂಲಂಕುಷವಾಗಿ ಪರಿಶೀಲಿಸಿ ಅಥಣಿ ತಾಲ್ಲೂಕನ್ನು ''ಬೂದು'' ಪ್ರದೇಶವೆಂದು ವರ್ಗೀಕರಣ ಮಾಡಿರುವುದನ್ನು ಮುಕ್ತಗೊಳಿಸುವ ಸಂಭವವಿದೆ.

ಆ) ಅಥಣಿ ತಾಲ್ಲೂಕಿನ ಅಗ್ರಾಣಿ ಹಳ್ಳದಿಂದ ಮರಳನ್ನು ಸಾಗಿಸುತ್ತಿರುವುದರಿಂದ ದುಷ್ಪರಿಣಾಮ ಹಾಗೂ ಹಾನಿ ಕುರಿತು ಸರ್ಕಾರದ ಗಮನಕ್ಕೆ ಬಂದಿದ್ದು, ಈ ಪ್ರದೇಶದಲ್ಲಿ 2 ಅಡಿ ಆಳದವರೆಗೆ ಮಾತ್ರ ಮರಳನ್ನು ತೆಗೆಯಲು ನಿಬಂಧನೆಯನ್ನು ಹಾಕಿ 30ಗಣಿ ಗುತ್ತಿಗೆಯನ್ನು